ಓ ಅಬೂ ದರ್! ನೀನು ಸಾರು ತಯಾರಿಸಿದರೆ, ಅದರ ನೀರನ್ನು ಹೆಚ್ಚಿಸು, ಮತ್ತು ನಿನ್ನ ನೆರೆಯವರನ್ನು ಪರಿಗಣಿಸು (ಅವರಿಗೂ ಅದರಿಂದ ಸ್ವಲ್ಪ ಕೊಡು)

ಅಬೂ ದರ್ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ: ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ಓ ಅಬೂ ದರ್! ನೀನು ಸಾರು ತಯಾರಿಸಿದರೆ, ಅದರ ನೀರನ್ನು ಹೆಚ್ಚಿಸು, ಮತ್ತು ನಿನ್ನ ನೆರೆಯವರನ್ನು ಪರಿಗಣಿಸು (ಅವರಿಗೂ ಅದರಿಂದ ಸ್ವಲ್ಪ ಕೊಡು)".
[صحيح] [رواه مسلم]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಅಬೂ ದರ್ ಅಲ್-ಗಿಫಾರೀ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಗೆ, ಅವರೇನಾದರೂ ಸಾರು ತಯಾರಿಸಿದರೆ, ಅದಕ್ಕೆ ನೀರು ಸೇರಿಸಿ ಸಾರನ್ನು ಹೆಚ್ಚಿಸಲು, ಮತ್ತು ತಮ್ಮ ನೆರೆಯವರನ್ನು ಪರಿಗಣಿಸಲು (ಅವರಿಗೂ ಸ್ವಲ್ಪ ನೀಡಲು) ಪ್ರೋತ್ಸಾಹಿಸಿದರು.

http://www.sunnah.global/hadeeth/kn/show/5336